

ಅವರು ಬೇಗನೇ ತೀರಿಕೊಂಡರು.

ಪರಂಜ್ಯೋತಿಯವರ ನಿಧನವಾರ್ತೆ ಬಂದಾಗ 'ಮಂಜಿನೆಡೆಯ ಚಿತ್ರಗಳು' ಕುರಿತು ಬರೆದು ಶ್ರದ್ಧಾಂಜಲಿ ಸಲ್ಲಿಸಬೇಕೆಂದು ಆಲೋಚನೆ ಬಂತು. ಆದರೆ ಮುಂದೂಡಿಕೊಂಡು ಬಂದೆ. ಹೀಗಿರುತ್ತ, ನನ್ನ ಬರಹಗಳನ್ನು ಓದುತ್ತ ವಿಮರ್ಶಾತ್ಮಕ ಪ್ರತಿಕ್ರಿಯೆ ನೀಡುವ ಸಸ್ಯಶಾಸ್ತ್ರಜ್ಞೆ ಪ್ರೊ. ಪದ್ಮಾ ಶ್ರೀರಾಂ, ಪರಂಜ್ಯೋತಿಯವರ ಪ್ರಸ್ತಾಪ ಮಾಡಿದರು. 'ಪರಂಜ್ಯೋತಿಯವರ ಕೃತಿಗಳ ಬಗ್ಗೆ ಚರ್ಚೆಯೇ ಆಗಿಲ್ಲ. ಅವರ ಬಗ್ಗೆ ನೀವೊಂದು ಲೇಖನ ಬರೆಯಬೇಕು' ಎಂದು ಹುಕುಂ ಮಾಡಿದರು. ಅವರೆಲ್ಲ ಪುಸ್ತಕಗಳನ್ನು ಕಳಿಸಿಕೊಟ್ಟರು. ನಾನು ಆದೇಶವನ್ನು ಪ್ರೀತಿಯಿಂದ ಒಪ್ಪಿಕೊಂಡೆ. ಪರಂಜ್ಯೋತಿಯವರ ಪ್ರವಾಸಕಥನ, ಸಣ್ಣಕಥೆ, ಕಾದಂಬರಿ, ಜೀವನಚರಿತ್ರೆ, ಪ್ರಬಂಧಗಳನ್ನು ಓದಿದೆ. ನೀಲಾಂಬರಿ ಹೆಸರಲ್ಲಿ ಬರೆದಿರುವ ಮಕ್ಕಳ ಸಾಹಿತ್ಯವನ್ನು ಗಮನಿಸಿದೆ. ಪರಂಜ್ಯೋತಿಯವರ ಬರಹಕ್ಕೆ ಸಲ್ಲಬೇಕಾದ ಮರ್ಯಾದೆ ಸಲ್ಲಲಿಲ್ಲ ಎಂದು ಅನಿಸಿತು. ಕನ್ನಡದಲ್ಲಿ